# ಅಧ್ಯಾಪಕ ಶ್ರೀ ವೈ. ಎಂ. ಶ್ರೀಧರ ರಾವ್

ಎಲ್ಲೂರು ಕಾಶೀ ಮನೆತನದ ಐದು ಕವಲುಗಳಲ್ಲಿ ಎರಡನೆಯ ಕವಲಿಗೆ ಸೇರಿದ ಶ್ರೀ ವೈ. ಎಂ. ಶ್ರೀಧರ ರಾವ್ ತಾ.06-03-1928 ರಂದು ಜನಿಸಿದರು. ತಂದೆ ಶ್ರೀ ಮಧ್ವರಾಯ. ತಾಯಿ ಶ್ರೀಮತಿ ಪದ್ಮಾವತಿ. ಇವರ ಎಂಟು ಮಂದಿ ಮಕ್ಕಳಲ್ಲಿ ಶ್ರೀ ಶ್ರೀಧರ ರಾವ್ ಏಳನೆಯವರು. ಎಲ್ಲೂರಿನ ಖಾಸಗಿ ಪ್ರಾಥಮಿಕ ಶಾಲೆಯಲ್ಲಿ ಐದನೆಯ ತರಗತಿಯವರೆಗೆ ಕಲಿತು ಮುಂದಿನ ಶಿಕ್ಷಣವನ್ನು ಬಂಟ್ವಾಳದಲ್ಲಿ ಮುಂದುವರಿಸಿದರು. ಅಕ್ಕ ಮತ್ತು ಬಾವನವರ ಮನೆಯಲ್ಲಿದ್ದು ಬಂಟ್ವಾಳದ ಎಸ್.ವಿ.ಎಸ್. ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಅಧ್ಯಯನ. ಅನಂತರ 1946-47ರಲ್ಲಿ ಮಂಗಳೂರಿನ ಸರಕಾರಿ ವಿದ್ಯಾಸಂಸ್ಥೆಯಲ್ಲಿ ಒಂದು ವರ್ಷದ ಶಿಕ್ಷಕ ತರಬೇತಿ. ತಾ.02-08-1947ರಂದು ಪಡುಬಿದ್ರಿ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕರಾಗಿ ಸೇರ್ಪಡೆ. ತಾ.29-05-1949ರಂದು ಪಡುಬಿದ್ರಿ ದುರ್ಗಿ ಮನೆತನದ ಪ್ರಸಿದ ಮದ್ದಳೆ ಮತ್ತು ಚಂಡೆವಾದಕ ಶ್ರೀ ಲಕ್ಷ್ಮೀನಾರಾಯಣಪ್ಪಯ್ಯನವರ ಮಗಳು ಕು| ಪದ್ಮಾವತಿಯನ್ನು ವಿವಾಹವಾದರು. ಶಿಕ್ಷಕ ವೃತ್ತಿಯಲ್ಲಿರುವಾಗಲೇ ಖಾಸಗಿಯಾಗಿ ಬಿ.ಎ. ಮುಗಿಸಿ ಪದವೀಧರ ಅಧ್ಯಾಪಕರಾದರು. ವೃತ್ತಿ ಬದುಕಿನಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಆದರ್ಶ ಶಿಕ್ಷಕರೆನಿಸಿದರು. ಮುಖ್ಯೋಪಾಧ್ಯಾಯ, ಪದವೀಧರ ಸಹಾಯಕ ಅಧ್ಯಾಪಕರಾಗಿ 36 ವರ್ಷ ಶಿಕ್ಷಕ ವೃತ್ತಿಯಲ್ಲಿ ದುಡಿದು ತಮ್ಮ 55ನೆಯ ಹರೆಯದಲ್ಲಿ ವೃತ್ತಿಯಿಂದ ನಿವೃತ್ತರಾದರು.



ಕ್ರಿಯಾಶೀಲ ಅಧ್ಯಾಪಕರಾಗಿದ್ದ ಶ್ರೀ ಶ್ರೀಧರ ರಾವ್, ಯಕ್ಷಗಾನ, ನಾಟಕ ಇತ್ಯಾದಿ ಲಲಿತ ಕಲೆಗಳಲ್ಲಿ ಆಸಕ್ತಿಯುಳ್ಳವರು. ಸ್ವತಃ ಪಾತ್ರವಹಿಸಿ ಅಭಿನಯಿಸಿದ ಹಿರಿಮೆ ಅವರದು. ಸ್ಕೌಟ್ ಮತ್ತು ಬಾಲವೀರ ದಳವನ್ನು ಕಟ್ಟಿ ಬೆಳೆಸಿದವರು. 1957-58ರಲ್ಲಿ ಅದಮಾರು ಮತ್ತು ಹಿರಿಯಡ್ಕ ಬೋರ್ಡು ಹೈಸ್ಕೂಲುಗಳ ಅಧ್ಯಾಪಕರಿಂದ ಜೋಡಾಟವನ್ನು ಸಂಘಟಿಸಿದ ಸೂತ್ರಧಾರಿ ಹಾಗೂ ಪಾತ್ರಧಾರಿ.

ಬರವಣಿಗೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡ ಶ್ರೀಯುತರು ಹಲವು ಕೃತಿಗಳ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. 1980ರಲ್ಲಿ ಎಲ್ಲೂರು ಕಾಶಿ ಮನೆತನದ ವಂಶವೃಕ್ಷ ಕೃತಿಯನ್ನು ಚಿತ್ರಸಹಿತ ಸಿದ್ಧ ಪಡಿಸಿದ್ದು ಇದರ ಎರಡನೆಯ ಆವೃತ್ತಿ 1990ರಲ್ಲಿ ಮುದ್ರಣಗೊಂಡಿದೆ. 1981ರಲ್ಲಿ ಉಡುಪಿಯಲ್ಲಿ ಶ್ರೀ ಶಾರದಾ ಮಂಟಪದ ಆಶ್ರಯದಲ್ಲಿ ವಿವಾಹ ವಿಚಾರ ವಿನಿಮಯ ಸೇವಾಕೇಂದ್ರದ ಸ್ಥಾಪನೆ ಮತ್ತು ಸುಲಗ್ನ ಮಾಸಪತ್ರಿಕೆಯನ್ನು ಆರಂಭಿಸುವುದರ ಹಿಂದೆ ಇವರ ಅಪಾರ ಶ್ರಮವಿದೆ. ನಿವೃತ್ತಿ ಪೂರ್ವದಲ್ಲಿ ಎಲ್ಲೂರಿನಲ್ಲಿ ಕಾಶೀ ಸಂತಾನ ಟ್ರಸ್ಟ್ (ರಿ.) ಸಂಸ್ಥೆಯನ್ನು ಸ್ಥಾಪಿಸಿ ಅದರ ಸಂಚಾಲಕರಾಗಿ ಮಾಡಿದ ಸೇವೆ ಗಣನೀಯವಾದುದು. ''ನಾನು ಅಧ್ಯಾಪಕ - ಅಧ್ಯಾಪಕನಾಗಿ ನಾನು'' ಎಂಬ ಅವರ ಕೃತಿ ಅತ್ಯಂತ ಮುಖ್ಯವಾದುದು. ಅಧ್ಯಾಪನದ ದಿನಗಳ ನೆನಪುಗಳು ಇಲ್ಲಿ ಸುಂದರವಾಗಿ ದಾಖಲಾಗಿವೆ. ಇದೇ ರೀತಿ 'ಪಡುಬಿದ್ರಿ ದುರ್ಗಿಮನೆ ಸದಾಶಿವ ರಾಯರು', 'ಪಾಕಶಾಸ್ತ್ರ ನಿಪುಣ ಎಲ್ಲೂರು ಹರಿಶ್ಚಂದ್ರ ರಾಯರು', 'ಪಡುಬಿದ್ರಿ ಕಲ್ಪತರು ಡಾ| ಪಿ. ಶ್ರೀನಿವಾಸ ರಾಯರು' ಇವರ ಇನ್ನಿತರ ಕೃತಿಗಳು.

ತಮ್ಮ ಕುಟುಂಬದ ನಾಗಬನ ಮತ್ತು ದೈವಸ್ಥಾನಗಳ ಜೀರ್ಣೋದ್ಧಾರ ಕಾರ್ಯದ ನೇತೃತ್ವವನ್ನು ವಹಿಸಿದಲ್ಲದೆ ತಮ್ಮ ಕುಟುಂಬದ ಸಮಸ್ತ ಬಂಧುಗಳ ವಿಳಾಸ ಪುಸ್ತಕವನ್ನು ಪ್ರಕಟಿಸಿ ಉಪಕಾರ ಮಾಡಿರುವರು.

ಶ್ರೀ ಶ್ರೀಧರರಾಯರ ಸಮಾಜಿಕ ಸೇವೆ, ಗೌರವದ ನಡವಳಿಕೆಗಳನ್ನು ಗುರುತಿಸಿ ಹಲವು ಸಂಘ ಸಂಸ್ಥೆಗಳು ಅವರನ್ನು ಗೌರವಿಸಿವೆ. ಉಡುಪಿಯ ಟೀಚರ್ಸ್ ಕೋ-ಓಪರೇಟಿವ್ ಬ್ಯಾಂಕ್, ಪಡುಬಿದ್ರಿ ಜೇಸೀಸ್, ಪಡುಬಿದ್ರಿ ಲಯನ್ಸ್ ಕ್ಲಬ್, ಕಾಪು ರೋಟರಿ ಕ್ಲಬ್, ಎಲ್ಲೂರು ನಿತ್ಯ ಸಹಾಯ ಮಾತಾ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ, ನಂದಿಕೂರು ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹೆಜಮಾಡಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮೊದಲಾದ ಸಂಸ್ಥೆಗಳು ತಮ್ಮ ವಿವಿಧ ಕಾರ್ಯಕ್ರಮಗಳಲ್ಲಿ ಶ್ರೀಯುತರನ್ನು ಗೌರವಿಸಿವೆ. ಅದಮಾರು ಯುವಕ ಮಂಡಲ ಮತ್ತು ಎಲ್ಲೂರು ಕಾಶೀ ಸಂತಾನ ಟ್ರಸ್ಟ್‌ನ ವಿಂಶತಿ ಸಮಾರಂಭದಲ್ಲಿ ಇವರನ್ನು ಸನ್ಮಾನಿಸಲಾಗಿದೆ. ಇನ್ನದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ಗೌರವಿಸಿದೆ. ಶ್ರೀ ಶ್ರೀಧರರಾವ್ ಇವರನ್ನು ಗೌರವಿಸುವ ಮೂಲಕ ಆಯಾ ಸಂಸ್ಥೆಗಳು ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿವೆ.

ಪ್ರಸ್ತುತ 81ರ ಹರೆಯದ ಶ್ರೀ ವೈ. ಎಂ. ಶ್ರೀಧರರಾಯರು ಇಂದಿನ ತಲೆಮಾರಿಗೆ ಆದರ್ಶಪ್ರಾಯರು. ಮಾರ್ಗದರ್ಶಕರು. ಅವರ ಸರಳ, ಸಾತ್ವಿಕ ಮನೋಧರ್ಮ ನಿಸ್ವಾರ್ಥ ಸೇವೆ ನಮಗೆಲ್ಲರಿಗೂ ಅನುಸರಣೀಯ. ಅಲ್ಲದೆ, ಶ್ರೀ ಸುಬ್ರಹ್ಮಣ್ಯ ಸಭಾ ಹಾಗೂ ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಾಗಿದ್ದರು. ಹಿರಿಯರಾದ ಶ್ರೀ ಶ್ರೀಧರರಾಯರಿಗೆ ನಮ್ಮ ಸಮಾಜದ ಅಭಿನಂದನೆಗಳು ಮತ್ತು ಗೌರವಪೂರ್ಣ ನಮನಗಳು.

ಸಂದರ್ಭ : ಶ್ರೀ ಸುಬ್ರಹ್ಮಣ್ಯ ಸಭೆಯ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಸನ್ಮಾನಗೊಂಡಾಗ. □

## ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ

ಶಿಕ್ಷಣ ಮತ್ತು ತರಬೇತಿ ವೇದಿಕೆಯ ವತಿಯಿಂದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ಪ್ರಥಮ ಹಂತದ ಒಂದು ದಿನದ ಪರೀಕ್ಷಾ ತರಬೇತಿ ಶಿಬಿರವು ದಿನಾಂಕ 26-10-2008 ರಂದು ಶಾರದಾ ಮಂಟಪದ ಆವರಣದಲ್ಲಿರುವ 'ಜ್ಞಾನಮಂದಿರ'ದಲ್ಲಿ ಯಶಸ್ವಿಯಾಗಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಶ್ರೀ ಸ್ಥಾನಿಕ ದಾವಿಡ್ರ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ಅವರು ನೆರವೇರಿಸಿದರು. ಸಂಘದ ಕಾರ್ಯದರ್ಶಿ ಶ್ರೀ ವೈ. ಭುವನೇಂದ್ರ ರಾಯರು ಎಸ್ಎಸ್ಎಲ್ಸಿ ಪರೀಕ್ಷಾ ಪದ್ಧತಿಯಲ್ಲಿನ ಇತ್ತೀಚಿನ ಬದಲಾವಣೆಗಳನ್ನು ವಿವರಿಸಿ ನೂತನ ಪದ್ಧತಿ ಮತ್ತು ಬದಲಾವಣೆಗಳೊಂದಿಗೆ ವಿದ್ಯಾರ್ಥಿಗಳು ಹೇಗೆ ಹೊಂದಿಕೊಂಡು ಉನ್ನತಿ ಸಾಧಿಸಬೇಕೆಂಬ ಸಂದೇಶ ನೀಡಿದರು. ವಿದ್ಯಾರ್ಥಿಗಳೊಂದಿಗೆ ಪಾಲಕರಾದ ಶ್ರಿ ವೈ. ಪ್ರಕಾಶ ರಾವ್, ಶ್ರೀ ಕೆ. ವಸಂತ ರಾವ್, ಶ್ರೀ ವೆಂಕಟ ರಾವ್, ಶ್ರೀ ರಮೇಶ್ ರಾವ್ ಸಮಾರಂಭ'ದಲ್ಲಿ ಭಾಗವಹಿಸಿದ್ದರು. ಡಾ| ವೈ. ಆರ್. ರಾವ್ ವಂದಿಸಿದರು. ಶ್ರೀ ಪ್ರಭಾಕರ ಭಂಡಿ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಶಿಬಿರದ ಪ್ರಥಮ ಗೋಷ್ಠಿಯಲ್ಲಿ ವೇದಿಕೆಯ ಅಧ್ಯಕ್ಷರಾದ ಡಾ| ವೈ. ರವೀಂದ್ರನಾಥ ರಾವ್ ಆವರು ಪರೀಕ್ಷಾ ಪೂರ್ವಸಿದ್ಧತೆ, ಯೋಜನೆ, ರೂಪರೇಷಗಳು, ನೆನಪಿನ ಶಕ್ತಿ ವೃದ್ಧಿಸಿಕೊಳ್ಳುವ ವಿಧಾನ ಮತ್ತು ತಂತ್ರಗಳ ಬಗ್ಗೆ ವಿವರಿಸಿ, ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮ ಹಾಗೂ ಹೊಣೆಗಾರಿಕೆಗಳನ್ನು ತಿಳಿಸಿದರು. ಬೆಳಗ್ಗಿನ ದ್ವಿತೀಯ ಗೋಷ್ಠಿಯಲ್ಲಿ ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಇವರು ಜೀವಶಾಸ್ತ್ರಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳು, ಸರಳ ರೀತಿಯಲ್ಲಿ ಚಿತ್ರಬಿಡಿಸುವ ವಿಧಾನಗಳು, ಪ್ರಶ್ನೆ ಪತ್ರಿಕೆಯ ಕುರಿತು ಚರ್ಚೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಟ್ಟರು.

ಮಧ್ಯಾಹ್ನದ ಗೋಷ್ಠಿಯಲ್ಲಿ ಮಣಿಪಾಲದ ಪದವಿಪೂರ್ವ ಕಾಲೇಜಿನ ವಿಜ್ಞಾನ ಶಿಕ್ಷಕರಾದ ಶ್ರೀ ನಾಗೇಂದ್ರ ಪೈ ಇವರು ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ ವಿಷಯಗಳ ಕುರಿತು ವಿವರವಾದ ಮಾಹಿತಿ ನೀಡಿ ಪರೀಕ್ಷೆಯಲ್ಲಿ ಉತ್ತರಿಸುವ ವಿಧಾನಗಳನ್ನು ಉದಾಹರಣೆಗಳ ಸಹಿತ ತಿಳಿಸಿದರು. ಶಿಬಿರದ ಮುಕ್ತಾಯದ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಶ್ರೀ ವೈ. ಭುವನೇಂದ್ರ ರಾವ್ ಶಿಬಿರದ ಯಶಸ್ಸಿಗೆ ಸಹಕರಿಸಿದ ವೇದಿಕೆಯ ಸದಸ್ಯರನ್ನು ಅಭಿನಂದಿಸಿದರು. ಉಡುಪಿ ಜಿಲ್ಲೆಯಿಂದ ಮಾತ್ರವಲ್ಲದೆ ದ.ಕ. ಜಿಲ್ಲೆಯ ಉಜಿರೆ ಕಡೆಯಿಂದಲೂ ವಿದ್ಯಾರ್ಥಿಗಳು ಆಗಮಿಸಿ ಈ ತರಬೇತಿಯ ಪ್ರಯೋಜನವನ್ನು ಪಡೆದರು. ಮೆನೇಜರ್ ಶ್ರೀ ಅಜಿತ್ ರಾವ್ ಊಟೋಪಚಾರ ವ್ಯವಸ್ಥೆಯಲ್ಲಿ ಸಹಕರಿಸಿದರು. □

## ಈಜಬೇಕು-ಈಜಿ ಜೈಸಬೇಕು (ನೆನಪಿನಂಗಳದಿಂದ)

**-ಗೋಪಾಲಕೃಷ್ಣ ಕೋಲ್ಪೆ, ಕಡಬ**

ಅದು ನನ್ನ ಹುಡುಗಾಟಿಕೆಯ ಸುಮಾರು ಹನ್ನೆರಡರ ಹರೆಯ. ನಮ್ಮ ಮೂಲ ಮನೆ ಪುತ್ತೂರಿನ ಕೋಲ್ಪೆಯಲ್ಲಿ ಮನೆ ಆಳು ಕೃಷ್ಣನೊಂದಿಗೆ ಹತ್ತಿರದ ನೀರಿನ ಮಡುವಿಗೆ ಎಮ್ಮೆ-ಕೋಣಗಳನ್ನು ತೊಳೆಯಲು ಹೋಗಿದ್ದೆ. ತುಂಬಿದ ಮಡುವಿನಲ್ಲಿ ಆ ಪ್ರಾಣಿಗಳು ಲೀಲಜಾಲವಾಗಿ ಈಜುತ್ತಿದ್ದವು. ಕೃಷ್ಣನಿಗೆ ಸಾದಾರಣ ಈಜು ತಿಳಿದಿದ್ದು - ಧೈರ್ಯಕ್ಕೆ ಎರಡು ಗೋಟು ತೆಂಗಿನ ಕ್ಯಾಗಳನ್ನು ಹಗ್ಗದಲ್ಲಿ ಕಟ್ಟಿ ಅದರ ಮಧ್ಯೆ ಎದೆಯೊಡ್ಡಿ ಈಜುತ್ತಾ ಎಮ್ಮೆಗಳನ್ನು ತಿಕ್ಕುತ್ತಿದ್ದ. ಈಜು ಗೊತ್ತಿಲ್ಲದ ನಾನು ಕೃಷ್ಣನನ್ನು ಗೋಗರೆದು ಕಲಿಸಲು ಕೇಳಿದೆ. ದಡಕ್ಕೆ ಸಮೀಪಿಸಿದ ಕೃಷ್ಣ ನನ್ನನ್ನು ಅವನ ಬೆನ್ನ ಮೇಲೆ ಏರಲು ತಿಳಿಸಿದ. ಬದಿಯಲ್ಲಿ ಹೆಚ್ಚು ಆಳವಿಲ್ಲದ ಕಾರಣ, ಅವನ ಬೆನ್ನ ಮೇಲೆ ಏರಿ ಕೈಕಾಲು ಬಡಿಯಲು ಶುರುಮಾಡಿದೆ. ಈಜುವುದು ಬಹಳ ಸುಲಭವೆಂದು ನನಗೆ ತೋರಿದಂತಾಗಿ, ಜೋರಾಗಿ ಕೈಕಾಲು ಬಡಿದಾಗ, ಅವನ ಎದೆ ಕೆಳಗಿದ್ದ ಗೋಟು ತೆಂಗಿನ ಕ್ಯಾಗಳು ತಪ್ಪಿ ಅವನು ಮುಳುಗತೊಡಗಿದ. ಈ ಮಧ್ಯೆ ನಾವು ಮಡುವಿನ ಆಳ ಇರುವ ಭಾಗಕ್ಕೆ ಬಂದಾಗಿತ್ತು. ಕೃಷ್ಣನೊಂದಿಗೆ ನಾನು ಮುಳುಗಿ ಅವನಿಂದ ಬೇರ್ಪಟ್ಟೆ. ನೀರಿನಲ್ಲಿ ಮೇಲೆ ಕೆಳಗೆ ಹೋಗುತ್ತಾ, ಹೊಟ್ಟೆ ತುಂಬಾ ನೀರು ಕುಡಿಯುತ್ತಾ, ಜೀವನದ ಆಸೆ ಬಿಟ್ಟೆ. ಕೃಷ್ಣನಿಗೆ ಪುಣ್ಯವಶಾತ್ ತೆಂಗಿನಕ್ಯಾ ಜೋಡಿ ಸಿಕ್ಕಿ ಈಜುತ್ತಾ ನನ್ನ ಹತ್ತಿರ ಬರುತ್ತಾ ಇರುವಾಗ, ನಾನು ಮೂರನೇ ಸಲ ತಳಸೇರಿದ್ದೆ. ಇನ್ನೇನು, ಯಮಲೋಕ ಪ್ರಯಾಣ ಹತ್ತಿರವಾದಂತೆ ಅನಿಸಿದಾಗ, ಪಕ್ಕನೆ ಕೈಗೆ ಏನೋ ಸಿಕ್ಕಿದಂತಾಗಿ ಗಟ್ಟಿಯಗಿ ಹಿಡಿದುಕೊಂಡೆ. ಆಶ್ಚರ್ಯ! ಕೆಲವು ಸೆಕೆಂಡುಗಳಲ್ಲಿ ಮೇಲೆ ದಡದಲ್ಲಿ ಬಿದ್ದ ನಾನು ಹಿಡಿದುಕೊಂಡದ್ದು ಯಮನ ವಾಹನದ ಕಾಲು ಎಂದು ತಿಳಿಯಿತು. ಹೆದರಿದ ಕೋಣ ನನ್ನನ್ನು ಎಳೆದುಕೊಂಡು ನೀರಿನಿಂದ ಮೇಲೆ ಬಂದಿತ್ತು. ಅಂತೂ ಯಮಲೋಕದ ಬದಲು ಭೂಲೋಕಕ್ಕೆ ಮರಳಿ ಬಂದ ನಾನು, ಸದ್ಯ ಅರ್ವತ್ತೇಳರ ಹರೆಯದಲ್ಲಿ, ಆ ಹಳೆ ಘಟನೆಯನ್ನು ಆಗಾಗ ಮೆಲುಕು ಹಾಕುತ್ತಾ ಈಜು ಕಲಿಯುವವರನ್ನು ಹುರಿದುಂಬಿಸುತ್ತಿದ್ದೇನೆ. ಆನಂತರದ ದಿನಗಳಲ್ಲಿ ಸರಿಯಾಗಿ ಈಜು ಕಲಿತು, ನೀರಿನಲ್ಲಿ ಮುಳುಗಿ ಹೋಗಲಿದ್ದ ನನ್ನ ಸ್ನೇಹಿತ ಸಹೋದ್ಯೋಗಿಯೊಬ್ಬರನ್ನು ಪಾರುಮಾಡಿ ಜಯಿಸಿದ ಹೆಮ್ಮೆಯೂ ನನಗಿದೆ. □


ಉಡುಪಿ ವಿಶಿಷ್ಟ ರುಚಿಯುಳ್ಳ

Rao's 'ಮಾತೃಛಾಯಾ'ರವರ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-

ಭಾರತ್ ಸ್ಟೋರ್ಸ್

ರಥಬೀದಿ, ಉಡುಪಿ - 576 101. ಫೋನ್ : 2522444



PRAMOD AUTOMOBILES

Ph : 2491723 (O)
2493633 (H.O.)
2212723 (R)

KARANGALPADY, MANGALORE - 575 003.

: Wholesale & Retail Dealers in :
2 & 3 WHEELERS SPARES & ACCESSORIES

Prop. : Ln. K. HARSHA KUMAR



ಸದಾಶಯ

ಸ್ಥಾನಿಕ ಬ್ರಾಹ್ಮಣ ವಧೂ-ವರರ ಮಾಹಿತಿ ಕೇಂದ್ರ

ಚಿಟ್ಪಾಡಿ, ಉಡುಪಿ.

: ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ :

ಎಂ. ಸದಾನಂದರಾವ್ ಮತ್ತು ಎಂ. ಸಂತೋಷರಾವ್, ಚಿಟ್ಪಾಡಿ, ಉಡುಪಿ

Ph : 2522638, 2523394



ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

